Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ೨೯ —

# ಸತ್ಯವಾದಿ
# SATYAVADI

ಸಂಪಾದಕರು– ಅರಮನೆ ಸಿಂಹ್ಯೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

17—3—1962

ಸ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

## ವರ್ತಕನಿಗೆ ಎರಡು ಸಹಸ್ರ ರೂ. ಮೋಸ

ತಿರುಚಿ ಜಿಲ್ಲೆಯ ಮುಸುರಿ ತಾಲ್ಲೂಕಿನ ಕಬ್ಬಿಣ ವ್ಯಾಪಾರಿ ತಂಗವೇಲು ಪ್ರಥಮಬಾರಿ ಮದ್ರಾಸಿಗೆ ಮೊನ್ನೆ ಬಂದರು ಅಪರಿಚಿತನೋರ್ವ ಅವರಿಗೆ ಸಿಕ್ಕಿ ವಿಧಾನಸಭೆಗೆ ಕರೆದುಕೊಂಡು ಹೋಗುವುದಾಗಿಯೂ, ಅದಕ್ಕೆ ಪಾಸುಬೇಡಿಯುವುದೇ ಕೆಂದು ತಿಳಿಸಿದನು ಮತ್ತೊಬ್ಬ ಅಪರಿಚಿತನು ಒಳಗೆ ಅವನನ್ನು ಪಾಸುಕೊಡುವುದಾಗಿಯೂ ಮೋಸಮಾಡಿದನು ಅಲ್ಲಿಗೆ ಹೋಗುವಾಗ ಎಲ್ಲವನ್ನು ಒಪ್ಪಿಸಿಹೋಗಬೇಕೆಂದು ಅವರು ತಿಳಿಸಿದರು ವರ್ತಕರು ರೂ 2030 ಇದ್ದ ಚೀಲವನ್ನು ಅವರಿಗೆ ಕೊಟ್ಟರು ಅನಂತರ ವರ್ತಕನಿಗೆ ಒಂದು ಕವರು ಕೊಟ್ಟು ಹಣ ಹಾಗೂ ಪಾಸು ಇದರಲ್ಲಿವೆ ಎಂದರು ವಿಧಾನಸಭೆಗೆ ಹೋಗು. ನಾವು ಬರುತ್ತೇವೆ ಎಂದರು ಮಂತ್ರಿಗಳು ಪ್ರಮಾಣವಚನ ಸ್ವೀಕಾರ ಮಹೋತ್ಸವ ಆರಂಭದಲ್ಲಿ ತಂಗವೇಲು ಮನ್ನ ಪೋಲೀಸರು ತಡೆದರು. ಪಾಸು ಇದೆ ಎಂದು ಕವರು ಒಡೆದಾಗ ಖಾಲಿ ಕಾಗದ ಇದ್ದಿತು.

## ಪಾಕಿಸ್ತಾನಕ್ಕೆ ಅಂಬರ ಚರಕ

ಪಾಕಿಸ್ತಾನದಲ್ಲಿ ಖಾದಿ ಕೈಗಾರಿಕೆ ಅಭಿವೃದ್ಧಿ ಮಾಡಲು ನಾನೂರು ಅಂಬರ ಚರಕವನ್ನು ಪಾಕಿಸ್ತಾನ ಕೇಳಿದ್ದಕ್ಕೆ ಕೊಡುವುದಾಗಿ ಭಾರತ ಒಪ್ಪಿದೆ.

## ಜನತಾ ಕಾರುಗಳು

ಅಲ್ಪ ಬೆಲೆಯ ಜನತಾ ಕಾರುಗಳ ಉತ್ಪಾದನೆಯು ಒಗ್ಗೆ ಇನ್ನು ನಾಲ್ಕಾರು ವಾರಗಳಲ್ಲಿ ನಿರ್ಧಾರವಾಗುವುದೆಂದು ಲೋಕಸಭೆಯಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಮನುಭಾಯಿ ತಿಳಿಸಿದರು.

★

ಗುಂಟೂರು ಮತ್ತು ಮಚಿಲಿಪಟ್ಟಣಗಳ ನಡುವೆ 107 ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದ ಬಸ್ಸೊಂದು ಪತ್ತೆ ಇಲ್ಲವೆಂದು ಆಂಧ್ರ ಸರ್ಕಾರವು ತಿಳಿಸಿದೆ.

## ಸಭಾತ್ಯಾಗ

ಚಂಡೀಘಡದಲ್ಲಿ ನಿನ್ನೆ ಪಂಜಾಬು ವಿಧಾನ ಸಭೆಯು ಆರಂಭವನ್ನು ರಾಜ್ಯಪಾಲರಾದ ಶ್ರೀ ಎಸ್ ಎ ಗಾಡಗೀಲರು ನೆರವೇರಿಸಿದಾಗ ಸರ್ವ ವಿರೋಧಪಕ್ಷಗಳಿಗೂ ಸೇರಿದ 59 ಮಂದಿ ಸಭಾತ್ಯಾಗ ಮಾಡಿದರು ಪಂಜಾಬಿನಲ್ಲಿ ನಡೆದ ಇತ್ತೀಚಿನ ಚುನಾವಣೆಯಲ್ಲಿ ರಾಜ್ಯಪಾಲರಾದ ಶ್ರೀ ಗಾಡಗೀಲ್ರವರು ಘಟನೆಗೆ ವಿರೋಧವಾಗಿ ನಡೆದ ಪ್ರತಿಭಟನಾರ್ಥ ಸಭಾತ್ಯಾಗ ಮಾಡುವುದಾಗಿ ಜನಸಂಘ ನಾಯಕರು ನುಡಿದರು. ಬೆಂಜುಗಳು ಖಾಲಿ ಬಿದ್ದರೆ ಚೆನ್ನಾಗಿ ಕಾಣದೆಂದು ಖಾಲಿಬಿದ್ದ ಸ್ಥಳಗಳನ್ನು ಮಂತ್ರಿಗಳು ಕಾಂಗ್ರೆಸಿಗರು ಆಕ್ರಮಿಸಿದರು.

## ಅಪಹರಣ

24 ಪರಗಣ ಜಿಲ್ಲೆಯ ಬಾಗ್ದ ಪೋಲೀಸು ಠಾಣೆ ಕೈಕಳಗಿನ ಖೈರಾಮಾರಿ ಗಡಿ ಗ್ರಾಮದಿಂದ ಕಾವಲು ಕೆಲಸದಲ್ಲಿ ಸಹಕರಿಸುತ್ತಿದ್ದ ರಾಷ್ಟ್ರೀಯ ಸ್ವಯಂ ಸೇವಕ ತಂಡದ ಸದಸ್ಯಸೋರ್ವನನ್ನು ಪಾಕಿಸ್ತಾನದ ಸಶಸ್ತ್ರ ಪೋಲೀಸರು ಅಪಹರಿಸಿದರು.

## ಮರಣ

ಬೆಂಗಳೂರು ಇಂಜಿನಿಯರಿಂಗು ಕಾಲೇಜಿನೆಯೊಂದಲ್ಲಿ ಓದುತ್ತಿದ್ದ 22 ವರ್ಷದ ಮುಕುದೇವ್ ಕಚೇರಿಗೆ ಹೋಗಲು ಮಹಡಿ ಹತ್ತುತ್ತಿದ್ದಾಗ ನಿನ್ನೆ ಪ್ರಜ್ಞೆತಪ್ಪಿ ಬಿದ್ದರು. ಅವರನ್ನು ಆಸ್ಪತ್ರೆಗೆ ಸಾಗಿಸಿದುದು ಫಲಯೋಜನೆವಾಗದೆ ಮರಣಹೊಂದಿದರು

× ಪರಿಯಾಪಟ್ಟಣದ ಬಳಿ ಟಿಬೆಟ್ ನಿರಾಶ್ರಿತರನ್ನು ನೋಡಲು ದಲಾಯಿ ಲಾಮಾರವರು ಈ ದಿನ ತೆರಳಿದರು.

## ನಾಳೆಯ ಹಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪಶ್ಯಾಮ್ಯ ಜ್ಯೋಯಿಸರಂದ

18 ಶ್ರಯೋದಶಿ ಉತ್ತರಾಷಾಢ

# ಕಾಶ್ಮೀರ ಬಗ್ಗೆ ಮಾತುಕತೆ ಸಂಭವ ಇಲ್ಲ

ಕರಾಚಿಯ ಅಧಿಕೃತ ವೃತ್ತವೊಂದರ ಪ್ರಕಾರ ಕಾಶ್ಮೀರ ಬಗ್ಗೆ ಮಂತ್ರಿ ಅಥವ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುವ ಯಾವ ಕಡಿಮೆ ಸಂಭವವೆಂದು ಗೊತ್ತಾಗಿದೆ

೦೦

ನವದೆಹಲಿಯಲ್ಲಿ ಶಿವಾನೇಶವಾಗಿರುವ ಲೋಕಸಭೆಯಲ್ಲಿ ಚೀನಾ–ಭಾರತ ಗಡಿ ಸಂಬಂಧಿಸಿದ ಇತ್ತೀಚಿನ ಗತ್ಯಗಳನ್ನಿಡಲಾಯಿತು. ಸಂಧಾನ ಮಾತುಕತೆಗಳಿಗೆ ಮುಂಚೆ ಆಕ್ರಮಣ ವಾಪಸು ಪಡೆಯುವಂತೆ ಚೀನಾದ ಶಾಂತಿ ಪ್ರಯತ್ನಗಳಿಗೆ ಉತ್ತರಿಸಿದೆ

ಮಾಸ್ಕೋದಿಂದ ಬಂದಿರುವ ವಾರ್ತಾ ಪ್ರಕಾರ ರಷ್ಯದ ವಿಜ್ಞಾನಿಗಳು ಕ್ಷಿಪಣಿ ಅಯುಧಗಳ ವಿರೋಧ ಕ್ಷಿಪಣಿಯ ಹಾಗೂ ಯಾವ ಕ್ಷಿಪಣಿಯನ್ನೂ ತಡೆಯುವ ವಿಶ್ವ ರಾಕೆಟ್ ತಯಾರಿಸಿರುವರು ಎಂಬುದಾಗಿ ಪ್ರಧಾನಿ ಕೃಶ್ಚೇವ್ರು ಕ್ರೆಮ್ಲಿನ ಚುನಾವಣೆ ಭಾಷಣದಲ್ಲಿ ನುಡಿದರು ಜರ್ಮನಿಯು ಒಪ್ಪಂದಕ್ಕೆ ರಿಜು ಬೀಳಲೇ ಬೇಕೆಂದು ಅವರು ನುಡಿದರು

ಪಾಕಿಸ್ತಾನ ವಶದಲ್ಲಿರುವ ಕಾಶ್ಮೀರ ಹಾಗೂ ಸಿಕಿಯಾಂಗ್ ಗಡಿ ವಿಷಯದಲ್ಲಿ ಚೀನಾ–ಪಾಕ್ ಪಾಕಿಸ್ತಾನ ಮಾತುಕತೆ ನಡೆಸಲು ಸರ್ವಥಾ ಒಲ್ಲೆವೆಂದು ನಿನ್ನೆ ಲೋಕಸಭೆಯಲ್ಲಿ ಮತ್ತೆ ಪುನಃ ನೆಹರು ತಿಳಿಸಿದರು

ಶಿಕ್ಷಣ ಮತ್ತು ಪಬ್ಲಿಕ್ ಸರ್ವಿಸು ಕಮಿಷನ್ ವರ್ಗಗಳನ್ನು ಕೇಂದ್ರ ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂದು ಶ್ರೀ ವೀರೇಂದ್ರ ಪಾಟೀಲರು ನಿನ್ನೆ ಲೋಕಸಭೆಯಲ್ಲಿ ನುಡಿದರು

175 ವೈಲುಗಳ ಎತ್ತರದಲ್ಲಿ ರಷ್ಯದ ಉಪಗ್ರಹ ಹಾರಾಡುತ್ತಿದೆ ಎಂದು ಪಶ್ಚಿಮ ಜರ್ಮನಿಯ ಬೊಕಂ ಅಬ್ಸರ್ವೇಟರಿ ತಿಳಿಸಿದೆ.

## ಅಶ್ಲೀಲ ಪುಸ್ತಕವಲ್ಲ

ಕಾದಂಬರಿಗಾರ ಡಿ ಹೆಚ್ ಲಾರೆನ್ಸರ ಲೇಡಿ ಚಟರ್ಲೀಸ್ ಲೌವರ್ ಅಶ್ಲೀಲವಾದ ಪುಸ್ತಕವಲ್ಲವೆಂದು ಕೆನಡಾದ ಸುಪ್ರೀಂ ಕೋರ್ಟು ತೀರ್ಮಾನಿಸಿರುವುದಾಗಿ ಒಟ್ಟಾವ ಸುದ್ದಿ ತಿಳಿಸುತ್ತದೆ.

★

ಕಲ್ಕತ್ತಾದಿಂದ ಬಂದಿರುವ ವರದಿ ಕೋಮಿಂಟಾಂಗು ಚೀನದ ಬೆಂಬಲಿಗರಾದ ನಾಲ್ವರು ಚೀನೀಯರಿಗೆ ಪೌಸಡೆನ್ಸಿ ನ್ಯಾಯಾಧೀಶರು ನಾಲ್ಕು ತಿಂಗಳು ಕಠಿಣ ಸಜೆ ವಿಧಿಸಿದರು. ಅಪಾಯಕಾರಿ ಆಯುಧಗಳೊಡನೆ ಕೆಮ್ಯೂನಿಸ್ಟು ಚೀನಕ್ಕೆ ಬೆಂಬಲಿಸುವ ಪತ್ರಿಕೆ ಕಚೇರಿ ಮುಂದೆ ದೊಂಬಿ ಮಾಡಿ ನಷ್ಟಮಾಡಿದ ಆರೋಪದ ಮೇಲೆ ಈ ದಂಡನೆ.

ಈ ವರ್ಷ ಭಾರತದ ಹಿಮ್ಮುಗವರ್ಷ ರಂ ನಿವೃತ್ತರಾಗುವರೆಂಬುದಾಗಿ ದೆಹಲಿಯಿಂದ ವಾರ್ತೆ ಬಂದಿದೆ ಆ ವೈಕಿ ಇಬ್ಬರು ಅಥವಾ ಮೂವರು ಮತ್ತೆ ರಾಜ್ಯಪಾಲರಾಗಿ ಮುಂದುವರಿಯುವ ಸಂಭವವಿದೆ ಮಹಾರಾಷ್ಟ್ರ, ಮೈಸೂರು, ಉತ್ತರ ಪ್ರದೇಶ ರಾಜಸ್ಥಾನದ ರಾಜ್ಯಪಾಲರು ತಮ್ಮ ಅಧಿಕಾರ ಅವಧಿ ಮುಗಿಸಿದ್ದಾರೆ. ಏಪ್ರಿಲು ಮಧ್ಯ ಭಾಗದಲ್ಲಿ ಅವರು ಒದಲಾವಣೆ.

ಅನಂತಪುರದ ಹೊಸಂಡ್ಡದ ಎಸ್ ಎಸ್ ಜಿ ಹೈಸ್ಕೂಲಿನ ಟಿ ರಾಜನ್ನನೆಂಬ ವಿದ್ಯಾರ್ಥಿನಿ ಆಕಸ್ಮಾತ್ತಾಗಿ ಭಾವಿಗೆ ಬೀಳಲು ಆ ಶಾಲೆಯ ಇಬ್ಬರು ಉಪಾಧ್ಯಾಯರು ಅವಳನ್ನು ರಕ್ಷಿಸಿದರು.

ಭಾರತ ಸರ್ಕಾರದವರು 1 ಲಕ್ಷ 90 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಸಕ್ಕರೆಯನ್ನು ಅನಿರ್ಬಂಧಿತ ವ್ಯಾಪಾರಕ್ಕೆಟ್ಟೆಯಲ್ಲಿ ವ್ಯಾಪಾರಕ್ಕಾಗಿ ಬಿಡುಗಡೆ ಮಾಡಿರುವರು.

## ಶ್ರೀ ಶಾರದಾ ಮಾತೆಯವರ ಕೆಲವು ಜೀವನ ಸ್ಮರಣೆಗಳು

✱

ಶ್ರೀ ರಾಮಕೃಷ್ಣ ಪರಮಹಂಸರು ಶ್ರೀ ಮಾತೆಯವರ ಕುರಿತಾಗಿ ಹೀಗೆಂದಿದ್ದರು— ಶಾಂದಾಮಣಿಗೆ ಮಕ್ಕಳ ಭಾಗ್ಯವೊಂದಿಲ್ಲವೆಂದು ತಿಳಿಯಬೇಡ; ಸಹಸ್ರ ಕುತಂಗಳಿಂದ 'ಅಮ್ಮ, ಅಮ್ಮ' ಎಂದು ಕಿವಿ ಕಿವುಡಾಗುವಷ್ಟು ಕರೆಸಿಕೊಳ್ಳುವ ಅನಂತ ಸಂತಾನ ಅವಳ ಪಾಲಿಗೆ ಬರುವುದು.

೦೦೨೦

ಪತಿತಂಗೆ ಪಾಪಿಗಳಿಗೆ ಆಶ್ರಯ ಕೊಟ್ಟು ಅವರ ಪಾಪಗಳ ಫಲ ತಟ್ಟಿಕೊಳ್ಳುವುದು ಯೋಗ್ಯವೇ ಎಂದು ಹಲವರು ಆಕ್ಷೇಪಿಸಿದಾಗ ಮಾತೆಯೆಂದರು— 'ಅವರು ತಮ್ಮ ಪಾಪದ ಹೊರೆಯನ್ನು ಇಳಿಸಲು ಇಲ್ಲಿ ಬಂದಿದ್ದಲ್ಲಿ ಮತ್ತೆಲ್ಲಿ ಹೋಗಬೇಕು? ನಾವು ಹಟ್ಟುವುದೇ ಅದಕ್ಕಾಗಿಯಲ್ಲವೇ? ಮಗು ಕೆಸರು ಬಳಿದುಕೊಂಡು ಮನೆಗೆ ಬಂದಾಗ ತಾಯಿ, ಅದನ್ನು ತೊಳೆದು ಸ್ವಚ್ಛಗೊಳಿಸಿ ಎತ್ತಿ ಮುದ್ದಿಸುವುದಿಲ್ಲವೇ? ಶ್ರೀ ರಾಮಕೃಷ್ಣರು 'ಂಸಗುಲ್ಲಾ' ತಿನ್ನಲಿಕ್ಕೆ ಮಾತ್ರ ನಮಗೆ ಕಲಿಸಿಕೊಟ್ಟಿಂವುದಿಲ್ಲ'.

೦೦೦೦

ಒಮ್ಮೆ ಅಡಿಗೆಯವನು ಅಡಿಗೆ ಮನೆಯನ್ನು ಗುಡಿಸಿ ಕಸಬರಿಕೆಯನ್ನು ಮೂಲೆಗೆ ಬಿಸಾಡಿದನು; ಆಗ ಮಾತೆಯವರು ಬೇಸರಗೊಂಡು ಹೇಳಿದರು— ಕಸಬರಿಕೆಯನ್ನು ಹಾಗೇಕೆ ಬಿಸಾಡಿದೆ? ಅದಕ್ಕೂ ಮರ್ಯಾದೆ ಇದೆ, ಸೇವೆಯನ್ನು ಮಾಡಿದ ಆ ಕಸಬರಿಕೆಗೆ ಹೀನಾಯಮಾಡಬೇಡ; ಅದನ್ನು ಹಾಗೆ ಎತ್ತಿ ಸರಿಯಾದ ಸ್ಥಾನದಲ್ಲಿ ಮೆಟ್ಟಿಗೆ ಇಡಬೇಕು: ಅದಕ್ಕೂ ಗೌರವವಿಡಿ'.

೦೦೦೦

ಒಮ್ಮೆ ಪಾಪಜೀವನವನ್ನು ನಡೆಸಿ ಬೆಗುಪ್ಪೆಗೊಂಡ ಪತಿತೆಯೊಬ್ಬಳು, ಜೀವನದಲ್ಲಿ ಶಾಂತಿಯನ್ನು ಪಡೆಯುವದಕ್ಕಾಗಿ ಮಾತೆಯಿಂದ್ದಲ್ಲಿಗೆ ಬಂದಳು: ಆಗ ಅವರ ಒಳಿಯ ಶಿಷ್ಯರು ಅವಳನ್ನು ತಡೆದು 'ನಿನಗೆ ಮಾತೆಯ ದರ್ಶನವಾಗಲಾರದು, ಈಗಲೇ ಇಲ್ಲಿಂದ ಹೊಂಡು' ಎಂದು ಗದರಿಸಿದಾಗ, ಮಾತೆ ಹೊರಗೆ ಬಂದು, ಬಾಗಿಲ ಒಳಿ ನಿಂತು, ಪತಿತೆಯ ಕೈಹಿಡಿದು 'ಬಾ ಅಮ್ಮ ಒಳಗೆ ಬಾ, ನಿಂತಿಶಳಾಗಬೇಡ, ನನ್ನ ಕಾಲನ್ನು ಮುಟ್ಟು, ಇಂದಿಗೆ ನೀನು ಪುನೀತಳು, ಇನ್ನು ಹಿಂದಿನ ವೃತ್ತಿಯನ್ನು ಪೂರ್ಣವಾಗಿ ಮನಸ್ಸಿನಿಂದ ತೊಡೆದು ಹಾಕು: ದೇವರ ಸ್ಮರಣೆ ಮಾಡು; ನಾನು ಕೊಡುವ ಮಂತ್ರವನ್ನು ಜಪಿಸು; ಆನಂದವಾಗಿ ಬಾಳು; ನಿನಗಿನ್ನು ಭಯವಿಲ್ಲ' ಎಂದು ಸಾಂತ್ವನಗೊಳಿಸಿ, ಮಂತ್ರವನ್ನು ಉಪದೇಶಿಸಿದರು.

**Both for the child and the mother ...**

Here is a rich, palatable, nutritive, vitamin-fortified food that children will love and thrive on! For nursing and expectant mothers too, this is ideal!

TRADE MARK

**EXTRACT of MALT with COD LIVER OIL**

THE MYSORE INDUSTRIAL & TESTING LABORATORY LTD. BANGALORE-3.

Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—

71/4 Arcot Sreenivasachar St., Bangalore 2.

**ವುಡ್‌ಲ್ಯಾಂಡ್ಸ್** ತೇಜಸ್ವಿ 6 ನೇ ವಾರ

**ಜಂಗ್ಲಿ (ಹಿಂದಿ) Junglee**

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

**ಆಪೆರಾ— 15-3-62 ರಿಂದ**

**ಅಡುತ ವೀಟು ಪೆಣ್** (ತಮಿಳು)

ಪಾತ್ರ— ಅಂಜಲೀದೇವಿ, ಟಿ. ಆರ್. ರಾಮಚಂದರ್, ಫ್ರೆಂಡ್ ರಾಮಸ್ವಾಮಿ

ಕರುಣಾನಿಧಿ [ದಿನವಹಿ 3 ಆಟಗಳು]

# SHAKTI SUDHA

A Superb Tonic

## Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಚಂದಾದಾರರಾಗಿರಿ


Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.